**1** ನೇ ಅಪರ ಸಿವಿಲ್ ನ್ಯಾಯಾಲಯ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ದಾವಾ ಸಂಖ್ಯೆಃ 1684/2007

ದಿನಾಂಕಃ 15.07.2023 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು.

**11** ನೇ ಪ್ರತಿವಾದಿ **(**ಲಕ್ಕಣ್ಣ**)** ರ ಪರ ವಕೀಲರಾದ ಶ್ರೀ ಎನ್ ಆರ್ ರವರಿಂದ ಸಾಕ್ಷಿಯ ಪಾಟೀ ಸವಾಲುಃ

11 ನೇ ಪ್ರತಿವಾದಿ ಲಕ್ಕಣ್ಣನು ವಜ್ರಪ್ಪರವರ ಮೊದಲನೇಯ ಹೆಂಡತಿಯ ಮಗ ಎಂದರೆ ನನಗೆ ಗೊತ್ತಿರುವುದಿಲ್ಲ. 1 ರಿಂದ 8 ನೇ ಪ್ರತಿವಾದಿಗಳು ಮತ್ತು ನಾನು ಒಟ್ಟಾಗಿ ಸೇರಿ 11 ನೇ ಪ್ರತಿವಾದಿಯನ್ನು ಬಿಟ್ಟು ಸರ್ವೆ ನಂ.156/2 ಕ್ಕೆ ಸಂಬಂಧಿಸಿದಂತೆ ಕ್ರಯ ಕರಾರು ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಗೊತ್ತಿರುವುದಿಲ್ಲ. ನಾನು 11 ನೇ ಪ್ರತಿವಾದಿಯನ್ನು ಉದ್ದೇಶ ಪೂರ್ವಕವಾಗಿ ಬಿಟ್ಟು ವ್ಯವಹಾರವನ್ನು ಮಾಡಿದ್ದು ಈಗ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಜ್ರಪ್ಪ ಮತ್ತು ಅವರ 2 ನೇ ಹೆಂಡತಿ ಮಕ್ಕಳಿಂದ ಕ್ರಯ ಕರಾರು ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸಾಕ್ಷಿ ನಾನು ವಜ್ರಪ್ಪ ಮತ್ತು ಹೆಂಡತಿ ಮಕ್ಕಳಿಂದ ಕ್ರಯ ಕರಾರು ಪತ್ರ ಮಾಡಿಕೊಂಡಿದ್ದು ನನಗೆ ವಜ್ರಪ್ಪನ 2 ನೇ ಹೆಂಡತಿ ಎಂದು ಗೊತ್ತಿರುವುದಿಲ್ಲ. ದಾವಾ ಸ್ವತ್ತು ಪಿತ್ರಾರ್ಜಿತ ಮತ್ತು ಜಂಟೀ ಕುಟುಂಬದ ಆಸ್ತಿಯಗಿದ್ದು 11 ನೇ ಪ್ರತಿವಾದಿಗೆ ಆ ಆಸ್ತಿಯಲ್ಲಿ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ. 11 ನೇ ಪ್ರತಿವಾದಿ ಮತ್ತು ಅವರ ತಂದೆ ವಜ್ರಪ್ಪ ಮತ್ತು ಅವರ ಹೆಂಡತಿ ಮಕ್ಕಳು ಎಲ್ಲರೂ ಸೇರಿ ಬೀಮನಕುಪ್ಪೆ ಗ್ರಾಮದ ಸರ್ವೆ ನಂ.7/5 ರಲ್ಲಿ 17 ಗುಂಟೆ ಜಮೀನನ್ನು ಮಹೇಶ ಎನ್ನುವವರಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ. ಆ ಮಾರಾಟ ಮಾಡಿದ ಕ್ರಯ ಪತ್ರಕ್ಕೆ11 ನೇ ಪ್ರತಿವಾದಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು 11 ನೇ ಪ್ರತಿವಾದಿಯನ್ನು ಮರೆ ಮಾಚಿ ಕ್ರಯ ಕರಾರು ಪತ್ರ ದಿನಾಂಕ 15.12.2000 ನ್ನು ಮಾಡಿಕೊಂಡಿದ್ದೇನೆ ಎಂದರೆ ಸಾಕ್ಷಿ 11 ನೇ ಪ್ರತಿವಾದಿ ವಜ್ರಪ್ಪನ ಮಗ ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ

ತಮ್ಮ ಮಹೇಶ ರವರು ವಜ್ರಪ್ಪರವರಿಂದ ಜಮೀನನ್ನು ಖರೀದಿ ಮಾಡಿರುವ ವಿಚಾರ ಗೊತ್ತಿದ್ದು ಈಗ ಉದ್ದೇಶ ಪೂರ್ವಕವಾಗಿ 11 ನೇ ಪ್ರತಿವಾದಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ನನಗೆ ವಜ್ರಪ್ಪ ಮತ್ತು ಅವರ ಹೆಂಡತಿ ಮತ್ತು ಅವರ ಇಬ್ಬರೂ ಹೆಣ್ಣು ಮಕ್ಕಳು ಇರುವ ವಿಚಾರ ನನಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. ಕ್ರಯದ ಮಾತುಕತೆಯ ಸಮಯದಲ್ಲಿ ಸರ್ವೆ ನಂ156/2 ರಲ್ಲಿ 26 ಗುಂಟೆ ಜಮೀನಿಗೆ ಎರಡು ಲಕ್ಷಕ್ಕೆ ಮಾತುಕತೆಯಾಗಿದ್ದು ಒಂದು ಲಕ್ಷ ಹಣವನ್ನು ಕ್ರಯ ಕರಾರು ಪತ್ರದಂತೆ ಮುಂಗಡವಾಗಿ ನೀಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕ್ರಯ ಕರಾರು ಪತ್ರಕ್ಕೆ ಷರಾ ಬರೆಸಿಕೊಂಡು 32 ಸಾವಿರ ಹಣವನ್ನು ನಾಲ್ಕು ದಿನಾಂಕಗಳಂದು ಪ್ರತಿವಾದಿ 1 ರಿಂದ 8 ರವರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

11 ನೇ ಪ್ರತಿವಾದಿಯು ದಾವಾ ಸ್ವತ್ತಿಗೆ ಕಾನೂನು ಬದ್ಧ ಮತ್ತು ಜಂಟೀ ಮಾಲೀಕ ಎಂದು ಗೊತ್ತಿರುವುದಿಲ್ಲ. ಈ ದಾವಾ ಸ್ವತ್ತಿನಲ್ಲಿ 11 ನೇ ಪ್ರತಿವಾದಿಗೆ ಕಾನೂನು ಬದ್ಧ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.7/5 ಮತ್ತು 156/2 11 ನೇ ಪ್ರತಿವಾದಿಯ ಪೂರ್ವಿಕರ ಸ್ವತ್ತಾಗಿದೆ ಎಂದರೆ ಸಾಕ್ಷಿ ಅದು ಹೊನ್ನಪ್ಪರವರ ಜಮೀನಾಗಿತ್ತು ಎಂದು ನುಡಿದಿರುತ್ತಾರೆ. ಸದರಿ ಹೊನ್ನಪ್ಪ 11 ನೇ ಪ್ರತಿವಾದಿಗೆ ಅಜ್ಜನಾಗಬೇಕು ಎಂದರೆ ನನಗೆ ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿ ವಜ್ರಪ್ಪ ನು ಹೊನ್ನಪ್ಪರವರ ಮಗ ಎಂದರೆ ಸರಿ.

ದಾವಾ ಸ್ವತ್ತನ್ನು 10 ನೇ ಪ್ರತಿವಾದಿ ಬಿಡಿಎ ರವರು ಸಾರ್ವಜನಿಕ ಉದ್ದೇಶಕ್ಕಾಗಿ (ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ) ಭೂ ಸ್ವಾಧೀನಪಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ಬಿಡಿಎ ರವರು ದಾವಾ ಸ್ವತ್ತನ್ನು ವಶಪಡಿಸಿಕೊಂಡಿದ್ದಕ್ಕೆ ಸಂಪೂರ್ಣ ಪರಿಹಾರದ ಹಣವನ್ನು 1 ರಿಂದ 8 ನೇ ಪ್ರತಿವಾದಿಯರಿಗೆ ನೀಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಮಾಕ್ಕಮ್ಮ ಹೊನ್ನಪ್ಪರವರ ಹೆಂಡತಿ ಎಂದರೆ ಸರಿ. ನನಗೆ ಬರೆದುಕೊಟ್ಟ ಕ್ರಯ ಕರಾರು ಪತ್ರಕ್ಕೆ 11 ನೇ ಪ್ರತಿವಾದಿ ಸಹಿ ಮಾಡಿಲ್ಲದ ಕಾರಣದಿಂದ ಆ ಕರಾರು ಪತ್ರವು ಕಾನೂನು ಬದ್ಧವಾಗಿ ಉರ್ಜಿತವಾಗುವುದಿಲ್ಲ ಎಂದರೆ ಸಾಕ್ಷಿ 11 ನೇ ಪ್ರತಿವಾದಿ ಯಾರು ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. 11 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಪಕ್ಷಕಾರರಾನ್ನಾಗಿ ಮಾಡಿಲ್ಲದ ಕಾರಣದಿಂದ ಈ ದಾವೆಯು ಕಾನೂನು ಬದ್ಧವಾಗಿ ಉರ್ಜಿತವಾಗುವುದಿಲ್ಲ ಮತ್ತು ವಜಾಗೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿ 11 ನೇ ಪ್ರತಿವಾದಿ ಯಾರು ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಗೆ ದಿನಾಂಕ 28.06.2021 ರ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ತೋರಿಸಿ ಮಹೇಶರವರ ಹೆಸರಿಗೆ ಆದ ಕ್ರಯ ಪತ್ರವಾಗಿರುತ್ತದೆ ಎಂದು ಕೇಳಿದ್ದರಿಂದ ಸಾಕ್ಷಿ ಹೌದು ಎಂದು ಉತ್ತರಿಸಿದರಿಂದ ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಿಕೊಳ್ಳಲಾಯಿತು. ಸಾಕ್ಷಿಗೆ ಸರ್ವೆ ನಂ.7/5 ರ 2011-12 ನೇ ಸಾಲಿನ ಪಹಣಿಯನ್ನು ತೋರಿಸಿ ಈ ಪಹಣಿಯು ಜಿ. ಮಹೇಶ ಬಿನ್ ಗಂಗಯ್ಯರವರ ಹೆಸರಿನಲ್ಲಿದೆ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಉತ್ತರಿಸಿದರಿಂದ ಸದರಿ ದಾಖಲೆಯನ್ನು ನಿಡಿ.2 ಎಂದು ಗುರುತಿಸಿಕೊಳ್ಳಲಾಯಿತು.

ಈ ಹಂತದಲ್ಲಿ **11** ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಅಂತೀಮವಾಗಿ ಮುಂದೂಡಲಾಯಿತು**.**

ಸಾಕ್ಷಿಯ ಹೇಳಿಕೆಯನ್ನು ನನ್ನ ಹೇಳಿಕೆಯ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೆ. ಸರಿ ಇದೆ

ಸಹಿ/-
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.